## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 22(131) |
| ಸದಸ್ಯರ ಹೆಸರು | : | ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.08.2025 |
| ಉತ್ತರಿಸುವವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 1994-95 ರಿಂದ ಇಲ್ಲಿಯವರೆಗೆ ಪದವಿ ಕಾಲೇಜುಗಳು ಮತ್ತು ಮಹಾ ವಿದ್ಯಾಲಯಗಳಲ್ಲಿ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | 1994-95 ರಿಂದ ಇಲ್ಲಿಯವರೆಗೆ ಪದವಿ ಕಾಲೇಜುಗಳು ಮತ್ತು ಮಹಾ ವಿದ್ಯಾಲಯಗಳಲ್ಲಿ ಬೋಧಕೇತರ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸಹಮತಿ ಮೇರೆಗೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಈ ಕೆಳಕಂಡಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮಗಳೇನು | |
| ಇ) | ಯಾವ ಕಾಲ ಮಿತಿಯಲ್ಲಿ ಈ ಪದವಿ ಹಾಗೂ ಮಹಾ ವಿದ್ಯಾಲಯಗಳಲ್ಲಿ ಭೋದಕೇತರ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮವಹಿಸಲಾಗುವುದು? | (ಕೆಳಗಿನ ಕೋಷ್ಟಕ ಮತ್ತು ವಿವರಣೆ ನೋಡಿ) |

| ಕ್ರ.ಸಂ | ವರ್ಷ | ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ |
|---|---|---|
| 1 | 1999 | 60 |
| 2 | 2000 | 36 |
| 3 | 2001 | 58 |
| 4 | 2004 | 08 |
| 5 | 2007 | 31 |
| 6 | 2009 | 92 |
| 7 | 2022 | 232 |

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪದವಿ ಕಾಲೇಜುಗಳಿಗೆ ಮಂಜೂರಾದ ಬೋಧಕೇತರ ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಹಾಗೂ ಮುಂಬಡ್ತಿಗೆ ಮೀಸಲಿರಿಸಲಾಗಿರುತ್ತದೆ.

ಮುಂಬಡಿಗೆ ಮೀಸಲಿರಿಸಿರುವ ಹುದ್ದೆಗಳನ್ನು ಅರ್ಹ ಪೋಷಕ ವೃಂದದಿಂದ ಕಾಲಕಾಲಕ್ಕೆ ಭರ್ತಿ ಮಾಡುವ ಕ್ರಮ ವಹಿಸಲಾಗುತ್ತಿದೆ.

ಬೋಧಕ ಮತ್ತು ಬೋಧಕೇತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿ ಕೋರಿ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿ, ಸಹಮತಿ ಬಂದ ಪ್ರಕರಣಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.

**ಸಂಖ್ಯೆ:ಇಡಿ 314 ಡಿಸಿಇ 2025(ಇ)**

(ಡಾ.ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು